# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 49 ಫ್ರಾ.ಸಾ. : 44**

| | | |
|---|---|---|
| ಸಾಕ್ಷಿಯ ಹೆಸರು | : | ನಾಮದೇವ ನಾಂದ್ರೆ |
| ತಂದೆಯ ಹೆಸರು | : | ನಂದಕುಮಾರ ನಾಂದ್ರೆ |
| ವಯಸ್ಸು | : | 34 ವರ್ಷ |
| ಕೆಲಸ | : | ಸಿಪಿಸಿ-1695, ಸೈಬರ್‌ಕ್ರೆಮ್ ಪೊಲೀಸ್ ಠಾಣೆ |
| ವಾಸ | : | ಕಾರವಾರ. |

**ದಿನಾಂಕಃ 30-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-</u>**

1. ದಿನಾಂಕಃ 13.09.2017 ರಿಂದ 07.08.2024 ವರೆಗೆ ನಾನು ಕಾರವಾರ ಶಹರ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ16.11.2018 ರಂದು ಕಾರವಾರ ಡಿಎಸ್‌ಪಿರವರು ನನಗೆ ಮೂರು ಸೀಲಾದ ವಸ್ತುಗಳನ್ನು ನೀಡಿ, ಅವುಗಳನ್ನು ಬೆಂಗಳೂರಿನ ಎಪ್‌ಎಸ್‌ಎಲ್‌ಗೆ ತಲುಪಿಸುವಂತೆ ಮೌಖಿಕವಾಗಿ ಸೂಚಿಸಿದ್ದು, ಅದರಂತೆ ಅದೇ ದಿನ ನಾನು ಬೆಂಗಳೂರಿಗೆ ಹೋಗಿ ಮರುದಿನ ಬೆಳಿಗ್ಗೆ ದಿನಾಂಕಃ 17.11.2018 ರಂದು ಮೂರು ಸೀಲಾದ ವಸ್ತುಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಎಪ್.ಎಸ್.ಎಲ್ ಗೆ ನೀಡಿ, ಸೀಕೃತಿಯನ್ನು ಪಡೆದುಕೊಂಡು ಅದೇ ದಿನ ಕಾರವಾರಕ್ಕೆ ಬಂದು ಸೀಕೃತಿ ಪತ್ರ ಸಂಖ್ಯೆಃ SFSL(Be)/901/2018 ನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ ಹಾಗೂ ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ತಂದಿದ್ದ ಸ್ವೀಕೃತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-116 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-</u>**

3. ನಾನು ಬೆಂಗಳೂರಿನ ಎಪ್.ಎಸ್.ಎಲ್ ಗೆ ಹೋಗಿ ಬಂದ ಬಗ್ಗೆ ನಮ್ಮ ಡೈರಿಯಲ್ಲಿ ನಮೂದಿಸಲಾಗಿದೆ. ಈ ಬಗ್ಗೆ ನಾನು ಯಾವುದೇ ಲಾಗ್‌ಬುಕ್ ನಿರ್ವಹಿಸಿರುವುದಿಲ್ಲ. ನಾನು

ಬೆಂಗಳೂರಿನ ಎಪ್.ಎಸ್.ಎಲ್ ಗೆ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ-116 ಸೀಕೃತಿ ಪತ್ರವನ್ನು ನಾನೇ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

4 ಕಾರವಾರದಿಂದ ಬೆಂಗಳೂರು ಎಷ್ಟು ಕಿ.ಮೀ ಇದೆ ಎಂದು ನನಗೆ ಗೊತ್ತಿಲ್ಲ. ಕಾರವಾರದಿಂದ ಬೆಂಗಳೂರಿಗೆ ಹೋಗಲು ಸುಮಾರು 12 ತಾಸುಗಳ ಪ್ರಯಾಣ ಆಗುತ್ತದೆ. ನಾನು ಬೆಂಗಳೂರಿನ ಎಪ್.ಎಸ್.ಎಲ್‌ನ ಕಛೇರಿ ತಲುಪಿದಾಗ ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ. ಅದೇ ದಿನ ಸಂಜೆ 7.00 ಗಂಟೆಗೆ ಬೆಂಗಳೂರಿನಿಂದ ಹೊರಟು ಮರುದಿನ ಬೆಳಿಗ್ಗೆ ದಿಃ 18.11.2018 ರಂದು ಕಾರವಾರಕ್ಕೆ ಬಂದಿರುತ್ತೇನೆ. ದಿನಾಂಕಃ 18.11.2018 ರಂದು ನಾನು ತನಿಖಾಧಿಕಾರಿಯವರಿಗೆ ಸ್ವೀಕೃತಿ ಪತ್ರವನ್ನು ನೀಡಿ, ಹೇಳಿಕೆಯನ್ನು ನೀಡಿರುತ್ತೇನೆ. ನಾನು ಬೆಂಗಳೂರಿನ ಎಪ್.ಎಸ್.ಎಲ್‌ಗೆ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿಲ್ಲ ಹಾಗೂ ಅವರಿಂದ ಯಾವುದೇ ಸ್ವೀಕೃತಿ ಪತ್ರವನ್ನು ತಂದಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ